ಕೆಮ್ಮಣ್ಣು ಗುಂಡಿ ರೋಪ್‌ವೇ ಬಗ್ಗೆ

೭೫. ಶ್ರೀ ಜಿ.ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೆಮ್ಮಣ್ಣು ಗುಂಡಿಯಲ್ಲಿರುವ ರೋಪ್‌ವೇ ಹಾಳಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಪ್ರವಾಸಿ ಧಾಮ ಹಾಗೂ ಪ್ರವಾಸಿ ಕೇಂದ್ರವಾದ ಕೆಮ್ಮಣ್ಣು ಗುಂಡಿಯ ಈ ರೋಪ್ ವೇ ಸರಿಪಡಿಸಿ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲಾಗುವುದೆ ?

(ಇ) ಕೆಮ್ಮಣ್ಣು ಗುಂಡಿಯಿಂದ ಹತ್ತಿರದ ತಣಿಗೆಬೈಲಿನವರೆಗೆ ಪ್ರವಾಸಿಗರಿಗೆ ರೋಪ್‌ವೇ ಅನುಕೂಲ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

ಶ್ರೀ ಆರ್. ಪಿ. ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ಸಚಿವರು).—

(ಅ) ಇಲ್ಲ.

(ಆ) ಪರಿಶೀಲಿಸಲಾಗುತ್ತಿದೆ.

(ಇ) ಇಲ್ಲ.

ರಾಜ್ಯ ಸರ್ಕಾರಿ ಸೌಮ್ಯದ ಸಂಸ್ಥೆಗಳಿಂದ ಕೆ.ಇ.ಬಿ.ಗೆ ಬರಬೇಕಾಗಿರುವ ಬಾಕಿ ಹಣ

ಶ್ರೀ ಎಸ್. ಎಂ. ಆಡ್ಕಂತಾಯ (ಸೂರತ್ಕಲ್).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯ ಸರ್ಕಾರಿ ಸಾಮ್ಯದ ಸಂಸ್ಥೆಗಳಿಂದ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಈವರೆಗೆ ಬರಬೇಕಾಗಿರುವ ವಿದ್ಯುತ್ ಬಿಲ್ ಬಾಕಿ ಹಣವೆಷ್ಟು.

(ಆ) ೨ ಲಕ್ಷಕ್ಕೂ ಅಧಿಕ ಬಾಕಿ ಕೊಡಬೇಕಾಗಿ ಇರುವ ವ್ಯಕ್ತಿಗಳು ಸಂಸ್ಥೆಗಳು ಹೆಸರುಗಳ ವಿವರ ಒದಗಿಸುವುದು.

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

(ಅ) ರಾಜ್ಯ ಇಲಾಖೆಗಳಿಂದ ಸರಕಾರಿ ಸಾಮ್ಯದ ಸಂಸ್ಥೆಗಳಿಂದ ಮತ್ತು ಬೋರ್ಡ್‌ಗಳಿಂದ, ಕಾರ್ಪೊರೇಷನ್‌ಗಳಿಂದ ವಿದ್ಯುತ್ ಮಂಡಳಿಗೆ ಬಿಲ್ ಬಾಬ್ತು ೩೧-೩-೧೯೮೭ರ ವೇಳೆಗೆ ೧೧೬.೪೫ ಕೋಟಿ ರೂಪಾಯಿಗಳು ಬರಬೇಕಾಗಿದ್ದಿತು.

(ಆ) ೩೧-೩-೧೯೮೭ರ ವೇಳೆಗೆ ೨ ಲಕ್ಷಕ್ಕೂ ಮೀರಿದ ಬಾಕಿ ಇರುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಒಟ್ಟು ಸಂಖ್ಯೆ ೫೨, ಇದರಲ್ಲಿ ನ್ಯಾಯಾಲಯದ ಮುಂದಿರುವ ಪ್ರಕರಣಗಳು ಸೇರಿಲ್ಲ. ವಿವರ ಅನುಬಂಧದಲ್ಲಿ ನೀಡಿದೆ.